Bangalore Corporation Act (Revision).

Q.—851. **Sri V. M. MASCARENHAS** (St. John's Hill).—Will the Government be pleased to state:—

if they contemplate revising the Bangalore Corporation Act ?

A.—**Sri T. CHANNIAH** (Minister for Public Health and Local Self-Government).—

Yes.

Sri V. M. MASCARENHAS.—Sir, could you please tell me when this contemplation will take place ?

Sri T. CHANNIAH.—We hope to bring this Bill in this Session. On account of important Bills to be passed into law in this session, we could not bring it so far. We however, hope to bring it in this session.

Sri V. M. MASCARENHAS.—Within this session itself ?

Sri T. CHANNIAH.—Yes.

ಶ್ರೀ ಆರ್. ಅನಂತರಾಮ್.—ಈ ತಿದ್ದುಪಡಿ ಮಾಡಬೇಕೆಂದು ಸುಮಾರು ಮೂರು ವರ್ಷದಿಂದ ಎಂದರೆ ಈ ಹೊಸ ಮಿನಿಸ್ಟ್ರಿ ಆದಮೇಲೆ ಕಾರ್ಪೊರೇಷನ್‌ನವರು ನಿರ್ಣಯಮಾಡಿಕಳುಹಿಸಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಕಳುಹಿಸಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ಕಾರ್ಪೊರೇಷನ್‌ನವರು ಕಳುಹಿಸಿದಂಥ ತಿದ್ದುಪಡಿಗಳನ್ನು ಅಂಗೀಕಾರಮಾಡಿದ್ದೀರೋ ಅಥವಾ ತಾವೇ ಬೇರೆ ತಿದ್ದುಪಡಿ ಮಾಡಿದ್ದೀರೋ ?

ಶ್ರೀ ಟಿ. ಚನ್ನಯ್ಯ.—ಅವರು ಕಳುಹಿಸಿರತಕ್ಕ ತಿದ್ದುಪಡಿಗಳೂ ಇವೆ, ಮತ್ತು ಸರ್ಕಾರದವರೂ ಕೂಡ ಅವಶ್ಯಕವಾದ ಅಂಶಗಳನ್ನು ಪರಿಶೀಲನೆಮಾಡಿ ತಯಾರುಮಾಡಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕಾರ್ಪೊರೇಷನ್ ಆಕ್ಟ್ ಪ್ರಕಾರ slum clearance ಮಾಡಬೇಕೆಂಬುದೂ ಒಂದು important item ಅಲ್ಲವೇ ?

Sri T. CHANNIAH.—Yes.

ಶ್ರೀ ಪಿ. ಆರ್. ರಾಮಯ್ಯ.—ಈಗಿನ ಕಾರ್ಪೊರೇಷನ್ ಆಕ್ಟ್‌ನಲ್ಲಿ ಇಂಡಿಯನ್ ಕಾನ್ಸ್ಟಿಟ್ಯೂಷನ್‌ಗೆ ವಿರೋಧವಾಗಿರತಕ್ಕ ಕೆಲವು ಅಂಶಗಳಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅವುಗಳನ್ನೆಲ್ಲಾ ಸರಿಪಡಿಸಲಿಕ್ಕೆ ಈ ಬಿಲ್ಲನ್ನು ಹೊಸದಾಗಿ ತಯಾರುಮಾಡಬೇಕಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಲೇಬರರ್ಸ್‌ಗೆ separate representation ಕೊಡತಕ್ಕದ್ದು ಕಾನ್ಸ್ಟಿಟ್ಯೂಷನ್‌ಗೆ ವಿರೋಧ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಅದೆಲ್ಲಾ matters of detail ಆಯಿತು. ಈಗ ಅದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಒಂದು ಬಿಲ್ ತಯಾರುಮಾಡಲಾಗಿದೆ. ಅದನ್ನು ತೆಗೆದುಕೊಂಡುಬರಬೇಕೆಂದು ಸರ್ಕಾರದ ಇಚ್ಛೆ ಇದೆ.

ಶ್ರೀ ಪಿ. ಆರ್. ರಾಮಯ್ಯ.—ಮುಂದಿನ ವರ್ಷ ಕಾರ್ಪೊರೇಷನ್ ಚುನಾವಣೆ ಡಿಸೆಂಬರ್‌ನಲ್ಲಿ ನಡೆಯಬೇಕಾಗಿದೆಯಲ್ಲ. ಅದಕ್ಕೆ ಮುಂಚೆಯೇ ಈ ತಿದ್ದುಪಡಿ ಆಕ್ಟು ಜಾರಿಗೆ ಬರುವಹಾಗೆ ಮಾಡಲು ಸರ್ಕಾರದವರು ಪ್ರಯತ್ನಪಾಡುತ್ತಾರೆಯೇ ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದಷ್ಟು ಜಾಗ್ರತೆ ಜಾರಿಗೆ ತರಲು ಪ್ರಯತ್ನಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.— ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ಆಕ್ಟ್‌ನಲ್ಲೂ ಕೂಡ ಬಹಳ ಲೋಪದೋಷಗಳಿವೆ. ಅದನ್ನು ಇದರ ಜೊತೆಯಲ್ಲೇ ಪರಿಶೀಲನೆಮಾಡುತ್ತೀರಾ ?

Mr. SPEAKER.—It does not arise.

ಶ್ರೀ ಜೆ. ನಾರಾಯಣಪ್ಪ.—ಈ ಕಾರ್ಪೊರೇಷನ್‌ನಲ್ಲಿ ಜನಗಳಿಂದ ಎಳೆಯಲ್ಪಡುತ್ತಾ ಇರತಕ್ಕ ರಿಕ್ಷಾಗಳು ಇನ್ನೂ ಇವೆ. ಇದು ಭಾರತದೇಶಕ್ಕೇ ತುಂಬಾ ಅವಮಾನ ಅಲ್ಲವೆ ?

Mr. SPEAKER.—It does not arise. It is an opinion.

ಶ್ರೀ ಜೆ. ನಾರಾಯಣಪ್ಪ.—ಅದಕ್ಕೆ ಉತ್ತರ ಬರಬೇಕು ಸ್ವಾಮಿ. ನಿಜವಾಗಿಯೂ ನಾನು ಅದನ್ನು ನೋಡಲಾರೆ.

ಅಧ್ಯಕ್ಷರು.—ಅದಕ್ಕೆ ಈ ಪ್ರಶ್ನೆಯಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ.

Tanks and Channels in Yelandur Taluk (Improvement and repairs).

Q.—167. **Sri B. RACHIAH** (Yelandur—Scheduled Castes).—

Will the Government be pleased to state :—

(*a*) the names of tanks and channels to which improvements by way of restoring, desilting and repairing have to be made in Yelandur Taluk fed by the river Suvarnavati ?

(*b*) the total estimated cost required for Yelandur Taluk ;

(*c*) the amount spent during 1953-54 and 1954-55 under ordinary original repairs and extraordinary repairs ;

(*d*) whether estimate for construction of Brushwood anicut to the channel of river Suvarnavati in Yelandur Taluk has been prepared ;

(*e*) the cost of the estimate ?

A.—**Sri Kadidal MANJAPPA** (Minister for Revenue and Public Works).—

(*a*) *Restoration of Tanks and Channels.*—

1. Amble Tank and Feeder Channel.
2. Uppinamole Tank and Feeder Channel.